(i) ಪ್ರಜಾವಾಣಿ ಹಾಗೂ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಿರುವ ವರದಿ :

+ ಶ್ರೀಮತಿ ಬಿ. ಟಿ. ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಉಪಾಧ್ಯಕ್ಷರೆ, ದಿನಾಂಕ : 26-3-1997ರ 'ಪ್ರಜಾವಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಬಂದಿರುವ ಒಂದು ವಿಷಯವು ಎಷ್ಟು ಸತ್ಯಕ್ಕೆ ದೂರವಾಗಿದೆಯೆಂದರೆ? ಸಿಓಡಿ ಯವರು ಯಾವುದೇ ರೀತಿಯ ವರದಿಯನ್ನು ಕೊಟ್ಟಿಲ್ಲ ಮತ್ತು ಸಚಿವಾಲಯದ ಮೂಲಗಳವರೂ ಸಹಾನಾವು ಯಾವುದೇ ವರದಿಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಆದರೂ ಕೂಡ ಈ ಎರಡೂ ಪತ್ರಿಕೆಗಳು ತಮ್ಮ ಘನತೆಯನ್ನು ಉಳಿಸಿಕೊಳ್ಳಲಾರದೆ ಈ ರೀತಿಯಾದ ಸತ್ಯಕ್ಕೆ ದೂರವಾದಂಥ ಒಂದು ವರದಿಯನ್ನು ಪ್ರಕಟ ಮಾಡಿ ತನ್ನ ತೇಜೋವಧೆಗೆ ಪ್ರಯತ್ನ ಮಾಡಿದೆ. ಇದಕ್ಕಾಗಿ ನಾನು ನಿಜವಾಗಿ ಬಹಳ ವಿಷಾಧವನ್ನು ವ್ಯಕ್ತಪಡಿಸುತ್ತಿದ್ದೇನೆ. ಏನಾದರೂ ಇದ್ದರೆ ಅದನ್ನು ಪತ್ರಿಕೆಗಳು ಸರಿಯಾದ ರೀತಿಯಲ್ಲಿ ನೋಡಬೇಕು ಮತ್ತು ಅದಕ್ಕೆ ಒಂದು ನಿಯಮ ಇದೆ. ಕೋರ್ಟ್‌ನಲ್ಲಿ ಇದ್ದರೆ. ಕೋರ್ಟ್ ಮೂಲದಿಂದ ವಿಷಯವನ್ನು ಸಂಗ್ರಹಿಸಿ ವರದಿ ಮಾಡಬಹುದು. ಆದರೆ ಇದು ಯಾವುದೂ ಇಲ್ಲದೆ, ಗುಪ್ತ ವರದಿಯನ್ನು ಯಾರಿಗೂ ಕೊಡದೇ ಇದ್ದರೂ ಕೂಡ ಒಬ್ಬ ವ್ಯಕ್ತಿಯ ತೇಜೋವಧೆ ಮಾಡುವುದು ಪತ್ರಿಕೆಗೆ ಸರಿಯಾದುದಲ್ಲವೆಂದು ತಮ್ಮ ಮೂಲಕ ಅವರಿಗೆ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಈ ಅಧಿವೇಶನವಾದಮೇಲೆ ಬಹುಶಃ ಸಂಪುಟ ಪುನರ್ ರಚನೆ ಇದೆ ಅದಕ್ಕಾಗಿ ಕೆಲವು ಕುತಂತ್ರಿಗಳು ಪತ್ರಿಕೆಯನ್ನು ಬಳಸಿಕೊಂಡಿರಬಹುದು, ಆದರೆ, ಒಂದನ್ನು ತಮ್ಮ ಮೂಲಕ ಹೇಳುತ್ತೇನೆ, ನಾವು ಚೆಂಡಿನ ತರಹ. ಚೆಂಡನ್ನು ತಾವು ತುಳಿದರೂ ಕೂಡ ಅದು ಪುಟಿದು ಮೇಲೆ ಬರುತ್ತದೆ. ನಮ್ಮಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆ ಇದೆ. ನಾವು ಸೇವಾ ಮನೋಭಾವದಿಂದ ಕೆಲಸ ಮಾಡುವುದರಿಂದ ನಮ್ಮನ್ನು ಯಾರೂ ತುಳಿಯುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವ ಮೊತನ್ನು ಪತ್ರಿಕೆಗೆ ಹೇಳುತ್ತಾ ಬಹಳ ಘನತೆ ಇರತಕ್ಕಂಥ ಪತ್ರಿಕೆ ಅದನ್ನು ಉಳಿಸಿಕೊಳ್ಳಬೇಕೆಂದು ತಮ್ಮ ಮೂಲಕ ಹೇಳುತ್ತೇನೆ.

(ii) ಕೋಲಾರ ಜಿಲ್ಲೆಯಲ್ಲಿ ಆಣೆಕಲ್ಲು ಮಳೆ ಬಿದ್ದುದ್ದರಿಂದ ಉಂಟಾಗಿರುವ ನಷ್ಟ

ಶ್ರೀ ಜಿ. ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಕಳೆದ ಶನಿವಾರ ಮತ್ತು ಭಾನುವಾರದಂದು ನಮ್ಮ ಕೋಲಾರ ಜಿಲ್ಲೆಯಲ್ಲಿ 'ಆಲಿ ಕಲ್ಲು' ಮಳೆ ಬಿದ್ದು ವಿಶೇಷವಾಗಿ ನಾಮ್ಮ ಜಿಲ್ಲೆಯ ನಾಲ್ಕೈದು ತಾಲ್ಲೂಕುಗಳಲ್ಲಿ ಅಪಾರ ನಷ್ಟವುಂಟಾಗಿದೆ. ಭತ್ತ, ಮಾವು, ರೇಷ್ಮೆ ಮತ್ತು ಹಲವಾರು ತರಕಾರಿ ಬೆಳೆಗಳಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಗಿದೆ. ನನ್ನ ಕ್ಷೇತ್ರವಾದ ಬಾಗೇಪಲ್ಲಿ ತಾಲ್ಲೂಕಿನಲ್ಲೇ ಸಧ್ಯಕ್ಕೆ ಬಂದಿರುವ ವರದಿ ಪ್ರಕಾರ 450 ಎಕರೆಯಲ್ಲಿ ಬೆಳೆದಿರುವ ಭತ್ತ, ಹಾಗೂ ಮಾವು ಮತ್ತು ರೇಷ್ಮೆ ಬೆಳೆಗೆ ಅಪಾರವಾಗಿ ನಷ್ಟವಾಗಿದೆ. ಇದೇ ಪರಿಸ್ಥಿತಿ ನಮ್ಮ ಜಿಲ್ಲೆಯ ಬೇರೆ